ಮೈಸೂರ ಗಝೆಟ್.

ನಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು [ನಂ. 29.

ಬೆಂಗಳೂರು, ಗುರುವಾರ, ಜುಲೈ ತಾ॥ 23, ಸ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಷ ವ ಯಡ್ಮಿನಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜಾಗ್ರಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 30ನೇ ಜೂ 1896.

ನಂ. 14005.—ಲೋ. ಘಂ. 257—92, ಸ್ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿರ್ಷ ರೆಗ್ಯುಲೇಷನಿನ 6ನೇ ಸೆಕ್ಷರ್ಷ ನಿಯಮಗಳನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ, ನಂಜನಗೂಡು ಪಟ್ಟಣದಲ್ಲಿ ಗೌರೀಘಟ್ಟದ ರಸ್ತೆಯನ್ನ ಅಗಲಪಡಿಸುವ ಬಗ್ಯಾಗಿ ಬೇಕಾಗಿರುತ್ತ:—

ಡಿಸ್ಟ್ರಿಕ್ಟ್—ಮೈಸೂರು.
ತಾಲ್ಲೂಕು—ನಂಜನಗೂಡು
ಹೋಬಳಿ—ಕಸಬಾ.
ಗ್ರಾಮ—ನಂಜನಗೂಡು.
ಹಿಡುವಳಿದಾರ ಹೆಸರು—ಲಕ್ಷ್ಮಮ್ಮ, ತಿರುಮಲಮ್ಮ.
ವಿವರ ಮತ್ತು ನಂಬರು—ಬಂದು ಜಗಲಿ ಮತ್ತು ಜಪ್ತಿರ ಸಹಿತ ವಾದ ಖಾಲೀ ಜಾಗ.

ಬೀಜವರಿ—20 ಸಲೆಗಜಗಳು.
ಪೇರೀಜ್—ಇಲ್ಲ.

ಚೆಕ್ಕು ಬಂದಿ:—
ಪೂರ್ವಕ್ಕೆ—ಅಪ್ಪಾಜಿಕಟ್ಟರ ಮತ್ತು ರಾಮಕಟ್ಟರ ಮನೆ.
ಪಶ್ಚಿಮಕ್ಕೆ—ಗೌರೀಘಟ್ಟದ ರಸ್ತೆ.
ಉತ್ತರಕ್ಕೆ—ಸುಬ್ಬರಾಯಶಟ್ಟರ ಮನೆಗೆ ಹೋಗುವಗಲ್ಲಿ (ಪೂರ್ವದಲ್ಲಿ ಅಂಕನಾಥಶಟ್ಟರ ಮನೆ)
ದಕ್ಷಿಣಕ್ಕೆ—ದೊಡ್ಡ ರಸ್ತೆ.

ತಾರೀಖು 8ನೇ ಜುಲೈ 1896.

ನಂ. 450.—ಎಫ್ಯು. 24, ಸ್ ೧೮೯೫ನೇ ಮಾರ್ಚಿ 18ನೇ ಮರ್ಕ್ಯಂ ಎ. 49ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ ಗವರ್ನಮೆಂಟ್ ಬಾಲಿಕಾ ಪಾಠಶಾಲೆಗಳ ಆಡಳಿತವನ್ನ ಕಮ್ಮಿಟಿಗಳಿಂದ ನಡಿಸುವ ಬಗ್ಯಾದ ರೂಲ್ಸಿನ 15ನೇ ರೂಲಿಗೆ ಈ ಕೆಳಗೆ ಕಂಡದ್ದನ್ನು ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ.

"ಪಾಠಶಾಲೆ ಸಿಬ್ಬಂದಿಯ ಯಾವನೊಬ್ಬ ಮೆಂಬರಿನ ಮೊಕರರಾತಿ, ಬಡ್ತಿ, ತೆಕ್ಕೆ, ಅಮಾನತ್ ಮತ್ತು ಬರತರಫ್ ಮಾಡುವಣ, ಇದಲ್ಲದೆ ಹಂಗಾಮಿಯಾಗಿ ಉತ್ತರಾಧಿಕಾರಿಯ ಮೊಕರರಾತಿಯನ್ನಾಗಲಿ ಯಾ ರಜಾ ಆಥವಾ ಆಕ್ಟಿಂಗ್ ಅಲೋವೆನ್ಸ್ ಕೊಡುವಣವನ್ನಾಗಲಿ ಬೇಕಾಗಿರತಕ್ಕ ಯಾವನೊಬ್ಬ ಮೆಂಬರಿನ ರಜಾವೂ, 1895ನೇ ಜೂನ್ 28ನೇ ಮರ್ಕ್ಯಂ 24799.—802—ಜ. 6289ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸಿನ 5ನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟ ಮೇರೆ ಅವರಿಗೆ ಕೊಡಲ್ಪಟ್ಟರುವ ಅಧಿಕಾರದೊಳಗಾಗಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ಯವರಿಂದಲೂ ಮತ್ತು ಇತರ ಸಂದರ್ಭಗಳಲ್ಲಿ ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸುವ ರೂಲ್ಸಿಗೆ ಒಳಪಟ್ಟು ಕಮ್ಮಿಟಿಯವರು ಕಳುಹಿಸುವ ವಿಚಾರಸುಗಳನ್ನ ಸರಿಯಾದ ಆಲೋಚನೆ ಮಾಡಿದ ತರುವಾಯ ಗವರ್ನಮೆಂಟಿನವರಿಂದಲೂ ಮಂಜೂರ್ಮಾಡಲ್ಪಡತಕ್ಕದ್ದು."

ತಾರೀಖು 10ನೇ ಜುಲೈ 1896.

ನಂ. 360.—ಫೈ. 29, ಮೈಸೂರ್ ಸರ್ವಿಸ್ ರಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಅಸಿಸ್ಟೆಂಟ್ ಕಂಟ್ರೋಲರ್ ಮೆಸ್ಸರ್ಸ್ ಹರ್ಬರಿ ಈಗಲ್ಸ್‌ಯವರಿಗೆ, 1896ನೇ ಜುಲೈ 4ನೇ ಮರ್ಕ್ಯಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಜುಲೈ 1896.

ನಂ. 767.—ಜಾ. 56, ಪೊಲೀಸ್ ಇಲಾಖೆಯಲ್ಲಿ ಈ ಕೆಳಗೆ ಕಂಡ ಬಡ್ತೀಗಳು 1896ನೇ ಜುಲೈ ಗುರ್ರೇ ಲಾಗಾಯತು ಸಬ್ ಪ್ರೋತವಾಗಿ ಮಂಜೂರ್ಮಾಡಲ್ಪಟ್ಟಿರುತವೆ:—

ಹೆಸರು.	ಇಂದ.	ಗೆ.
1. ಮೆ॥ ಸ್ಯೆಯದ್ ಅಮೀರ್ ಹಸ್ರ್ಯಯವರು	2ನೇ ಕ್ಲಾಸ್ ಸೂಪರ್‌ಟೆಂಡೆಂಟ್	1ನೇ ಕ್ಲಾಸ್ ಸೂಪರ್‌ಟೆಂಡೆಂಟ್
2. ,, ಎಂ. ನಂಜರಾಜ ಅರಸಿನವರು	1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್	2ನೇ ಕ್ಲಾಸ್ ಡಿಟೋ
3. ,, ಪಿ ಎಫ್. ಬೌರಿಂಗ್‌ಯವರು	2ನೇ ಕ್ಲಾಸ್ ಡಿಟೋ ಡಿಟೋ	1ನೇ ಕ್ಲಾಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ (ಪೊಲೀಸ್ ಲಿಸ್ಟಿನಲ್ಲಿ ನೆಕೆಂಡ್ಮಾಡಲ್ಪಟ್ಟಿರುತ್ತಾರೆ.)

ನಂ. 770.—ಜಾ. 59, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಅಮಲ್ದಾರ್‌ಗಳೂ ಡೆಪ್ಯೂಟಿ ಅಮಲ್ದಾರ್‌ಗಳೂ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ:—

ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ರು ಬಿ. ಕೃಷ್ಣಸಿಂಗ್‌ಯವರು.
ನಂಜನಗೂಡು ತಾಲ್ಲೂಕು ಅಮಲ್ದಾರ್ರು ಸಿ. ವೆಂಕಟರಾಯರು.
ದೇವನಹಳ್ಳಿ ತಾಲ್ಲೂಕು ಅಮಲ್ದಾರ್ರು ಎಂ. ರಂಗರಾಯರು.
ಗುಡಿಬಂಡ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರು ಸಿ. ಕೃಷ್ಣಮನಾಯಿಡು ಯವರು.
ಶ್ರೀರಂಗಪಟ್ಟಣದ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರು ಡಿ. ಸುಬ್ಬರಾಯರು.
ಹರಿಹರದ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರು ಎಂ. ರಂಗನಾಥರಾಯರು.
ಶ್ರೀನಿವಾಸಪುರದ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರು ಎಂ. ಕೃಷ್ಣಸ್ವಾಮಯ್ಯಂಗಾರ್ ಯವರು.
ಹುಂಸೀ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್ದಾರ್ರು ಚಿನ್ನಪ್ಪವು ಪಿಳ್ಳೆಯವರು.

ನಂ. 808.—ಮಿ. 140, ಘನವನ್ನು ಹೊಂದಿದ ಶ್ರೀಮ್ ಮಹಾರಾಜ್ಞೀ ರೀಜಂಟ್‌ಯವರು, ಈ ಕೆಳಗೆ ಕಂಡ ಮೊಕರರಾತಿಗಳು ಮಾಡಿರುತ್ತಾರೆ:—

1. ಮೆಸ್ಸರ್ ಎಚ್. ಲಿಂಗರಾಜ ಅರಸಿನವರು ದರ್ಬಾರ್ ಬಕ್ಷಿಯಾಗಿ ಅವರು ಸದರೀ ಉದ್ಯೋಗದ ಚಾರ್ಜನ್ನು ವಹಿಸಿದ ತಾರೀಖು ಲಾಗಾಯತು ಯಿರತಕ್ಕದ್ದು.
2. ಮೆಸ್ಸರ್ ಎಂ. ಶಾಮರಾಯರು ಅರಮನೆ ಲಾಯಗಳ ಸೂಪರ್‌ಟೆಂಡೆಂಟಾಗಿರತಕ್ಕದ್ದು.

ನಂ. 812.—ಮಿ. ಫೈ. 349.—92, ಸ್ ೧೮೯೬ನೇ ಮಾರ್ಚಿ 20ನೇ ಮರ್ಕ್ಯಂ 10902.— ಜ. ಫೈ. 349.—92ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿಯಾದ ಮೇರೆ 1893ನೇ ಮೇ 15ನೇ ಮರ್ಕ್ಯಂ 18948.—ಜ. ಫೈ. 349.—92ನೇ ನಂಬರ್ ಇಸ್ತಿಹಾರಿನೊಡನೆ ಫಾಯಿಷ್ ಮಾಡಲ್ಪಟ್ಟ ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಗೆ ಸಂಬಂಧಪಟ್ಟ ರೂಲ್ಸಿನ 3ನೇ ರೂಲಿಗೆ ಈ ಕೆಳಗೆ ಕಂಡ ರೂಲನ್ನು ಬದಲಾಗಿ ಸೇರಿಸತಕ್ಕದ್ದು.

"3. ಪರೀಕ್ಷೆಯು ಇದರೆ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿಯೂ ಮತ್ತು ಪ್ರತಿ ವರುಷ ನವಂಬರ್ ತಿಂಗಳಲ್ಲಿನ ಯಾಗ್ಜಾಮಿನರುಗಳ ಬೋರ್ಡು ಸೆಕ್ರಿಟೆರಿಯವರಿಂದ ಪ್ರಸಿದ್ಧ ಪಡಿಸಲ್ಪಡಬಹುದಾದ ಫಲಾನೇ ತಾರೀಖು ವ ಘಂಟೆಗಳಲ್ಲಿಯೂ ನಡಿಸಲ್ಪಡುವದು.

ಬೆಂಗಳೂರು.	ಕೋಲಾರ.	ಚಿತ್ರದುರ್ಗ.	ತುಮಕೂರ್.	
ಮೈಸೂರು.	ಶಿವಮೊಗ್ಗಾ.	ಚಿಕ್ಕಮಗಳೂರು.	ಹಾಸನ.	

240

ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳಿಗೆ ಕೇರುವ ಜಾಸ್ತಿ ಅಂಶಗಳು ಮತ್ತು ತಿದ್ದುಪಾಟುಗಳು.

ನಂ.

ಪುಟ 185, ಅಪ್ಪೆಂಡಿಕ್ಸ್ ನಂಬರ್ 2.

ಈ ಕೆಳಗೆ ಕಂಡದ್ದನ್ನು ಸಬ್ ಜಡ್ಜಿಗಳ ಎಂಬ ಮಾತಿನ ಕೆಳಗೆ ಕೇರಿಸತಕ್ಕದ್ದು:—

ಚೀಫ್ ಕೋರ್ಟಿನ ರಿಜಿಸ್ಟ್ರಾರ್ರು.	3 ರೂಪಾಯಿಗಳು.	6 ಆಣೆಗಳು.

ತಾರೀಖು 17ನೇ ಜುಲೈ 1896.

ನಂ. 915.—ಜು. 79, ಹೊಳೇನರಸೀಪುರದ ಮುನ್ಸಿಫ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಮೆಸ್ಸರ್ ಪಿ. ಏ. ಶಿವಪ್ರಕಾಶಂಪಿಳ್ಳೆಯವರು, 1859ನೇ ಇಸವಿಯ 13ನೇ ನಂಬರ್ ಬ್ರೀಚ್ಆಫ್ ಕಾಂಟ್ರಾಕ್ಟ್ ಆಕ್ಟ್ ಅನುಸರಿಸಿ, ಮೊಕದ್ದಮೆಗಳನ್ನು ದರ್ಯಾಫ್ತ್ ಮಾಡುವ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಜುಲೈ 1896.

ನಂ. 1035.—ಜು. 93, ಈ ಕೆಳಗೆ ಕಂಡ ಬಡ್ತಿಗಳು 1896ನೇ ಜುಲೈ ಗುರ್ತೇ ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ.

ಮೆಸ್ಸರ್ ಟಿ. ಜೆ. ವ್ಯಾಂಡರ್ಲೋಫ್ ಯವರು 1ನೇ ಕ್ಲಾಸ್ ಮುನ್ಸಿಫ್‌ರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಎರಡನೇ ಕ್ಲಾಸ್ ಮುನ್ಸಿಫ್ ಮೆಸ್ಸರ್ ಬಿ. ಶ್ರೀನಿವಾಸರಾಯರು ಮೆಸ್ಸರ್ ವೆಂಕಟವರದಯ್ಯಂಗಾರ್ರು ಬೇರೇಕೆಲಸದ ಮೇಲಿರುವ ಕಾಲದಲ್ಲಿ 1ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ಮೆಸ್ಸರ್ ಬಸವಾರಾಧ್ಯಯವರು 2ನೇ ಕ್ಲಾಸ್ ಮುನ್ಸಿಫರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ಮೂರನೇ ಕ್ಲಾಸ್ ಮುನ್ಸಿಫ್ ಮೆಸ್ಸರ್ ಪಿ. ಏ. ಶಿವಪ್ರಕಾಶಂಪಿಳ್ಳೆಯವರು ಮೆಸ್ಸರ್ ಎಸ್. ವೆಂಕಟವರದಯ್ಯಂಗಾರ್ರು ಬೇರೇ ಕೆಲಸದ ಮೇಲಿರುವ ಕಾಲದಲ್ಲಿ 2ನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ಮೆಸ್ಸರ್ ಎಲ್. ಯಸ್. ಏ. ಡಿಕ್ರೂಜ್‌ಯವರು 3ನೇ ಕ್ಲಾಸ್ ಮುನ್ಸಿಫ್‌ರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಜುಲೈ 1896.

ನಂ. 98.—ರೆ. 23, ಸ್ಯ 1888ನೇ ಇಸವಿಯ IVನೇ ಮೈಸೂರ್ ಲ್ಯಾಂಡ್ ರೆವಿನ್ಯೂ ರೆಗ್ಯುಲೇಷನಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನು ಮಾಗಡೀ ತಾಲ್ಲೂಕಿನಲ್ಲಿರುವ ಕಾಯಂ ಗುತ್ತಾ ಕುರುಬರಹಳ್ಳಿ ಗ್ರಾಮಕ್ಕೆ ಲಗಾವಾಗತಕ್ಕದ್ದೆಂದು ಮೈಸೂರ್ ಗವರ್ನ್‌ಮೆಂಟಿನವರು ಆಜ್ಞಾಪಿಸುತ್ತಾರೆ.

ತಾರೀಖು 9ನೇ ಜುಲೈ 1896.

ನಂ. 385.—ರೆ. ಫೈ. 97.—95, ತುಮಕೂರು ಡಿಸ್ಟ್ರಿಕ್ಟ್ ಯಕ್ಸ್‌ಪ್ಟ್) ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಪಿ. ವೆಂಕಟರಾಯರಿಗೆ, 1896ನೇ ಏಪ್ರಿಲ್ 25ನೇ ಮುಕ್ತಂ 6199.—200ನೇ ನಂಬರ್ ಗವರ್ನ್‌ಮೆಂಟ್ ಪ್ರೊಸಿಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟ ಹದಿನೈದು ದಿನಗಳ ಕ್ಯಾಜುಯಲ್ ರಜಾ 1896ನೇ ಏಪ್ರಿಲ್ 27ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು 1896ನೇ ಮೇ 6ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸಕ್ಕೆ ವಾಪಸ್ ಬಂದಿರುವ ಸಬಬ್ ಉಪಯೋಗಿಸಿಕೊಳ್ಳದ ಉಳಿದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಜುಲೈ 1896.

ನಂ. 596.—ರೆ. ಫೈ. 104.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ, 1896ನೇ ಜುಲೈ 4ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಜುಲೈ 1896.

ನಂ. 614.—ಲೋ. ಫಂ. 257.—92, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಯ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧ ಪಡಿಸುವದೇನಂದರೆ,—ಇದರಡಿ ಕಂಡ ಖಾಲೀ ಕಟ್ಟಡ ಜಾಗಾಗಳು ವ ಕಟ್ಟಡಗಳು ಸರ್ಕಾರ್ ಕೆಲಸಕ್ಕೆ ಅಂದರೆ ಅಜ್ಜಂಪುರದಲ್ಲಿ ಬಸವನ ಭಾವಿಗೆ ಹೋಗುವ ಗಲ್ಲಿಯನ್ನು ವಿಸ್ತರಿಸುವ ಬಗ್ಗಾಗಿ ಬೇಕಾಗಿರುತವೆ:—

ಷಹರಿನ ಹೆಸರು—ಅಜ್ಜಂಪುರ ಷಹರ್
ಹಿಡುವಳಿದಾರ್ರ ಹೆಸರು—ಬಿ. ಶಂಕರಪ್ಪ
ಬೇಕಾಗಿರುವ ಜಮೀನಿನ ತಪಶೀಲ್—ಹೆಂಚಿನಮನೆ
ಬೀಜವರಿ —480 ಚದುರಡಿಗಳು

ಚಕ್ಕ ಬಂದಿ:—
ಉತ್ತರಕ್ಕೆ —ಸದರೀ ಮನೆಯ ಉಳಿದಭಾಗ
ಪೂರ್ವಕ್ಕೆ —ನಡಿಯುವ ಗಲ್ಲಿ

ಚಕ್ಕ ಬಂದಿ:—
ದಕ್ಷಿಣಕ್ಕೆ —ಮ್ಯುನಿಸಿಪಲ್ ಚರಂಡಿ
ಪಶ್ಚಿಮಕ್ಕೆ —ಮ್ಯುನಿಸಿಪಲ್ ರಸ್ತೆ
ಷರಾ:—
ಲಾಂಬಿ—ಉತ್ತರ ದಕ್ಷಿಣ 80 ಅಡಿಗಳು
ರುಂದಿ—ಪೂರ್ವ ಪಶ್ಚಿಮ 6 ಅಡಿಗಳು

ತಾರೀಖು 23ನೇ ಜೂ 1896.

ನಂ. 11086.—ರೆ. ಘಾ. 50.—92, ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1894ನೇ ಇಸವಿಯ VIIನೇ ಮೈಸೂರ್ ಲ್ಯಾಂಡ್ ಅಕ್ವಿಜಿಷ್ಷ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿಕಂಡ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಬೆಂಗಳೂರು ಸಿಟಿಯ ಸದರ್ ಮಹಾರಾಟ್ಟಾ ರೈಲ್ವೆ ಗೂಡ್ಸ್ ಷೆಡ್ ಬಡಾಯಿಸುವ ಬಗ್ಯಾಗಿ ಅವಶ್ಯಕವಾಗಿರುತವೆ.

ನಂಬರ್.	ಮೂಲೀಕರು ಯಾ ಅನುಭವದಾರ್ರ ಹೆಸರುಗಳು.	ಬೀಜವರಿ. ಚದುರಡಿಗಳು.	ಎಕರೆಗಳು.	ಗುಂಟೆಗಳು.	ಪರಾ.
1	ಹೇಮಾಶಾಮಯ್ಯ, ಅನುಭವದಾರ ಕವಾಡಿಗರ ಮರಿಯಪ್ಪ ..	11,533½	..	10½	ತೊಲೆಗಳನ್ನು ಕುಯ್ಯುವದಕ್ಕೆ ಉಪಯೋಗಿಸಿರುವ ಗುಣಿ.
2	ಷಾಪುನಾರಾಣಶೆಟ್ಟಿ ..	6,970	..	6½	ಮೈದಾನು (ಖಾಲಿಜಾಗ).
3	ಮೀಸ್ತ್ರೀನಾರಾಯಣಪ್ಪನ ಛತ್ರ ..	7,476	..	6¾	ಸರಹದ್ದು ಗೋಡೆಯು ಕಲ್ಲಿನಿಂದ ಕಟ್ಟಲ್ಪಟ್ಟಿದೆ. ವಶಾರದಲ್ಲಿ 46 ಅಂಕಣಗಳ ಹಂಚಿನಮನೆಯಿದೆ.
4	ಸೆಟ್ಟೂರು ಕೃಷ್ಣಯ್ಯಂಗಾರ್, ಅನುಭವದಾರ್ರು ಮಂಜೇಪಲ್ಲಿ ನಂಜುಂಡಪ್ಪ ಮತ್ತು ಮರಿಯಪ್ಪ ..	9,126¼	..	8¼	ಮೈದಾನು (ಖಾಲಿಜಾಗ).
5	ಮೀಸ್ತ್ರಿ ಮರಿಯಪ್ಪನವರ ಛತ್ರ ..	19,737	..	18¼	ಸರಹದ್ದು ಗೋಡೆಗಾಗಿ ಕಲ್ಲುಚಪ್ಪಡಿಗಳು ಭೂಮಿಯಲ್ಲಿ ಹೂಳಲ್ಪಟ್ಟಿರುತ್ತವೆ ವಶಾರದಲ್ಲಿ 18 ಅಂಕಣಗಳ ಕಲ್ಲು ಮತ್ತು 32 ಅಂಕಣಗಳ ಹಂಚಿನ ಕಟ್ಟಡಗಳು ಯಿರುತವೆ.
6	ಶೇಷಗಿರಿರಾವ್, ಅನುಭವದಾರ್ ಯಂಗಣ್ಣಶೆಟ್ಟಿ ..	16,514¼	..	15¼	ಮೈದಾನು (ಖಾಲಿಜಾಗ). ಒಂದು ಹುಣಸೇಮರವಿದೆ.
7	ವೆಂಕಟೇಶಯ್ಯ ಮತ್ತು ಇತರರು, ಅನುಭವದಾರ್ ರಾಮಣ್ಣನ ಲಿಂಗಣ್ಣ.	12,240	..	11⅓	ಮೈದಾನು (ಖಾಲಿಜಾಗ).
8	ಯಂಗಣ್ಣಶೆಟ್ಟಿ ..	7,353¾	..	6¾	ಡಿಟೋ.
9	ನರಹರಿರಾವ್, ಸ್ಕೂಲ್‌ಮಾಸ್ಟರ್ ..	7,353¾	..	6¾	ಡಿಟೋ.
9	ಪುಟ್ಟಣ್ಣನ ಛತ್ರ ..	18,471	..	17	ಉತ್ತರ ಮತ್ತು ದಕ್ಷಿಣ ಗೋಡೆಗಳು ಕಲ್ಲುಚಪ್ಪಡಿಗಳಿಂದಲೂ, ಪೂರ್ವಕ್ಕೆ ಯಿಟ್ಟಿಗೆಯಿಂದಲೂ, ಪಶ್ಚಿಮಕ್ಕೆ ಕಲ್ಲಿನಿಂದಲೂ ಕಟ್ಟಲ್ಪಟ್ಟಿವೆ, ವಶಾರವು 12 ಅಂಕಣ ಹಂಚುಗಳ, 7 ಅಂಕಣ ಕಲ್ಲಿನ ಮತ್ತು 24 ಅಂಕಣ ಮಣ್ಣಿನ ಮಾಳಿಗೆಯ ಕಟ್ಟಡಗಳು ವುಂಟಾಗಿವೆ.
10	ಮುತ್ತಿನ ಕಂಪಸ್ವಾಮಿಮಠ ..	23,061¼	..	21	ಕಲ್ಲಿನ ಸರಹದ್ದುಗೋಡೆಯಿದೆ, ವಶಾರದಲ್ಲಿ 9 ಅಂಕಣ ಕಲ್ಲಿನ ಮತ್ತು 10 ಅಂಕಣ ಹಂಚಿನ ಕಟ್ಟಡಗಳುಯಿವೆ.
11/1	ಚನ್ನಪಟ್ಟಣ ಶ್ರೀಪಾದರಾವ್, ಅನುಭವದಾರ್ ರಾಮಣ್ಣನ ಲಿಂಗಣ್ಣ ..	10,665	..	9¾	ಮೈದಾನು (ಖಾಲಿಜಾಗ).
11/2	ಬಾಲಕೃಷ್ಣರಾವ್, ಅನುಭವದಾರ್ ಯಂಗಣ್ಣಶೆಟ್ಟಿ ..	10,665	..	9¾	ಡಿಟೋ.
12	ಗವರ್ಮೆಂಟ್ ..	153,791	3	21	ಯಿದರಲ್ಲಿ ಬಂದು ಹಂಚಿನಮೊಳಿಗೆ ಯಿದೆ.
13	ಡಿಟೋ ..	14,298	..	13	ಯಿದರೊಳಗೆ ಕಲ್ಲಿನಿಂದ ಕಟ್ಟಲ್ಪಟ್ಟು ಬಂದು ಛತ್ರವೂ ಮತ್ತು ಬಂದು ಆಕ್ಟ್ರಾಯಿ ಚಾವಡಿಯೂ ಸಹ ಯಿದೆ.
	ಪಬ್ಲಿಕ್‌ರಸ್ತೆ ..	..	1	10	ರಸ್ತೆ.
	ಅಡ್ಡರಸ್ತೆ ..	..	..	20	ಅಡ್ಡರಸ್ತೆ.
	ಜುಮ್ಲಾ	..	9	12¼	

ತಾರೀಖು 13ನೇ ಜುಲೈ 1896.

ನಂ. 437.—ರೆ. 155, ಮೈಸೂರ ಸರ್ವಿಸ್ ರೆಗ್ಯುಲೇಷ್ಷಗಳ 171ನೇ ಆರ್ಟಿಕಲ್ ಅನುಸರಿಸಿ, ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ಪಿ. ಸೀತಾರಾಮಯ್ಯನವರಿಗೆ, ಮಾಹೆಮಜಕೂರ್ 4ನೇ ಮತ್ತು ಮಿನಲ್ಲಿ ವೊಂದುದಿನವ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 440.—ರೆ. 159, ಮೈಸೂರ ಸರ್ವಿಸ್ ರೆಗ್ಯುಲೇಷ್ಷಗಳ 171ನೇ ಆರ್ಟಿಕಲ್ ಅನುಸರಿಸಿ, ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ಜೆ. ಶ್ರೀನಿವಾಸರಾಯರಿಗೆ, 1896ನೇ ಜುಲೈ 5ನೇ ಮತ್ತು ಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತ.

ತಾಲ್ಲೂಕು ಶಿರಸ್ತೇದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಅಮಲ್ದಾರ್ರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 14ನೇ ಜುಲೈ 1896.

ನಂ. 535.—ಫಾ. ಫೈ. 91.—95, ಪಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಫಾರೆಸ್ಟ್ಗಳ ಅಸಿಸ್ಟೆಂಟ್ ಕ್ಯಸರ್ವೇಟರ್ ಮೆಸ್ಸರ್ ಬಿ. ಶ್ರೀನಿವಾಸರಾಯರಿಗೆ, 1896ನೇ ಏಪ್ರೆಲ್ 10ನೇ ಮಕ್ತುಂ 9316.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಕಾಹಿಲೇ ರಜಾ ಮತ್ತು 1896ನೇ ಏಪ್ರೆಲ್ 18ನೇ ಮಕ್ತುಂ 9474.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ, ಇನ್ನೂ ಎರಡು ತಿಂಗಳ ವರಿಗೆ ಜಾಸ್ತೀ ಮಾಡಲ್ಪಟ್ಟಿದ್ದದ್ದು ಪುನಹ ಆರು ವಾರಗಳ ವರಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಫಾರೆಸ್ಟುಗಳ ಯಕ್ಸಾಪ್ಟ್ ಅಸಿಸ್ಟೆಂಟ್ ಕ್ಯಸರ್ವೇಟರ್ ಮೆಸ್ಟರ್ ಮ್ಯಾಟೀರೋ ಯವರು ಸದರೀ ಶ್ರೀನಿವಾಸರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಪಿಕಾರಿಪುರದ ಸಬ್ ಡಿವಿಜನಿನ ಚಾರ್ಜಿನಲ್ಲಿ ಇನ್ನೂ ಯಿರತಕ್ಕದ್ದು.

ನಂ. 463.—ರೆ. 174, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ನಂಜನಗೂಡು ತಾಲ್ಲೂಕು ಅಮಲ್ದಾರ್ ವೈ. ನರಸಣ್ಣನವರಿಗೆ, 1896ನೇ ಜುಲೈ ಗುರ್ಯೇ ತಾರೀಖು ಲಾಗಾಯತು ಎರಡು ತಿಂಗಳೂ ವ ಇಪ್ಪತ್ತೊಂದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಮಂಜೂರ್ಮಾಡಲ್ಪಟ್ಟ ರಜಾ ಪೂರೈಸಿದ ತಾರೀಖು ಲಾಗಾಯತು ಅವರು ತಮ್ಮ ಕೆಲಸದಿಂದ ವರ್ಷವೇಲೆ ನಿವೃತ್ತರಾಗುವದಕ್ಕೆ ಪೂರ್ವದ ರಜಾವಾಗಿರುತ್ತೆ.

ನಂ. 466.—ರೆ. 177, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ ಸಿ. ವೆಂಕಟಾಚಲಯ್ಯನವರಿಗೆ, 1896ನೇ ಜುಲೈ ಗುರ್ಯೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ರಜಾ ಪೂರೈಸಿದ ತರುವಾಯ ಅವರು ತಮ್ಮ ಕೆಲಸದಿಂದ ವರ್ಷವೇಲೆ ನಿವೃತ್ತರಾಗತಕ್ಕದ್ದು.

ತಾರೀಖು 15ನೇ ಜುಲೈ 1896.

ನಂ. 512.—ರೆ. ಫೈ. 146.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಅರಕಲ್ಗೂಡು ತಾಲ್ಲೂಕು ಅಮಲ್ದಾರ್ ಬಿ. ಶಂಕರಯ್ಯನವರಿಗೆ, 1896ನೇ ಜುಲೈ 15ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರು ತಮ್ಮ ಸ್ವಂತ ಕೆಲಸಗಳೊಂದಿಗೆ ಸದರೀ ಅಮಲ್ದಾರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬನ್ಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ಮ ರವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷ್ಗ.

ನಂ. 86. ತಾರೀಖು 15ನೇ ಜುಲೈ 1896, ಬೆಂಗಳೂರು.

ಮಂಜರಾಬಾದ್ ತಾಲ್ಲೂಕು ಸಕ್ಲೇಶಪುರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಶ್ರೀಸಕಲೇಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದು ಮಾಡುವವರನ್ನ 2 ವರುಷ ಪರಿಯಂತ್ರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

1. ಕಾಫಿಪ್ಯಾಟರ್ ವಳಲಹಳ್ಳಿ ಮಂಜಯ್ಯನವರು.
2. ಪಟೇಲ್ ಮತ್ತು ಜಮೀರ್ದಾರ್ ಸಕಲೇಶಪುರದ ಸುಬ್ರಾಯರು.
3. ಕಾಫಿಪ್ಯಾಟರ್ ಗುಂಡೆಕೆರೆ ಶ್ರೀಕಂಠಯ್ಯನವರು.
4. ಡಿಟೋ ಬೆಳ್ಳೂರು ಮೈಲಾರಯ್ಯನವರು.

ನಂ. 89. ತಾರೀಖು 16ನೇ ಜುಲೈ 1896, ಬೆಂಗಳೂರು.

ಮಾಗಡಿ ತಾಲ್ಲೂಕು ಕುದೂರಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಪ್ರಸನ್ನ ಗಂಗಾಧರೇಶ್ವರಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನ 2 ವರುಷ ಪರಿಯಂತ್ರ ಧರ್ಮದರ್ಶಿಗಳನ್ನಾಗಿ ನೇಮಿಸಿ ಇಧೆ:—

1. ಕುದೂರಲ್ಲಿರುವ ಶಾನುಭೋಗ ಪುಟ್ಟರಂಗಯ್ಯನವರು.
2. ,, ಪಟೇಲ್ ಕೆಂಪೇಗವ್ವಡರು.
3. ,, ವೈಶ್ಯ ವೆಂಕಟಾಚಲಶೆಟ್ಟರು.
4. ,, ಶಿವಾಚಾರದ ನಾಲಿಂಕಪ್ಪನವರು.
5. ,, ನಾರಶಿದೇವರು.

ಎ. ಶ್ರೀನಿವಾಸಾಚಾರ್ಯ,
ಮುಜರಾಯಿ ಸೂಪರ್ಟೆಂಡೆಂಟ್ ಮತ್ತು ಸೆಕ್ರಿಟೆರಿ.